I/189894/2021

## ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ:- ನಿಗಮ, ಮಂಡಳಿಗಳಲ್ಲಿ ಕೆಲಸ ನಿರ್ವಹಿಸುತ್ತಿರುವ ಸರ್ಕಾರೇತರ ಅಧಿಕಾರಿ/ನೌಕರರ ಸಾಮಾನ್ಯ ಭವಿಷ್ಯ ನಿಧಿ ಅಂತಿಮ ಹಿಂತೆಗೆತಗಳನ್ನು ಪಾವತಿಸುವ ಬಗ್ಗೆ.

ಓದಲಾಗಿದೆ:-

1. ಸರ್ಕಾರದ ಆದೇಶ ಸಂ:ಆಇ 61 ಟಿಎಆರ್ 2018, ದಿ:29.12.2018.
2. ಖಜಾನೆ ಆಯುಕ್ತರ ಪತ್ರ ಸಂ:ಖಇ/ಪ್ರಕ್ರಿಯೆ/03/2020-21, ದಿ:6.5.2021.
3. ಮಹಾಲೇಖಪಾಲರ ಪತ್ರ ಸಂ:FMC/GIII/2021-22/20, ದಿ:20.10.2021.

*********

**ಪ್ರಸ್ತಾವನೆ:-**

ಮೇಲೆ(1)ರಲ್ಲಿ ಓದಲಾದ ಆದೇಶದಲ್ಲಿ ನಿಗಮ, ಮಂಡಳಿಗಳಲ್ಲಿ ನಿಯೋಜನೆ ಮೇಲೆ ಕೆಲಸ ನಿರ್ವಹಿಸುತ್ತಿರುವ ಸರ್ಕಾರಿ ಅಧಿಕಾರಿ / ನೌಕರರ ಸಂಬಂಧ ಸಾಮಾನ್ಯ ಭವಿಷ್ಯ ನಿಧಿ ಮುಂಗಡ / ಅಂಶಿಕ / ಅಂತಿಮ ಹಿಂತೆಗೆತಗಳನ್ನು ಮಾತ್ರ ಇಲಾಖೆಯ ಮುಖ್ಯಸ್ಥರು ಅಥವಾ ನಿಯಂತ್ರಣಾಧಿಕಾರಿಗಳು ಖಜಾನೆ-2 ರ ಮುಖಾಂತರ ಪಾವತಿಸಲು ಆದೇಶಿಸಲಾಗಿದೆ.

ನಿಗಮ, ಮಂಡಳಿ ಮತ್ತು ಸ್ವಾಯತ್ತ ಸಂಸ್ಥೆಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಅಧಿಕಾರಿ/ನೌಕರರು ಸರ್ಕಾರಿ ಅಧಿಕಾರಿಗಳಾಗದೆ ಇರುವುದರಿಂದ ಖಜಾನೆ-2 ರಲ್ಲಿ ಬಿಲ್ಲುಗಳನ್ನು ಆನ್‌ಲೈನ್ ನಲ್ಲಿ ಸೃಜಿಸಿ ಚಂದಾದಾರರನ್ನು ಸ್ವೀಕರ್ತರನ್ನಾಗಿ ನೋಂದಾಯಿಸಿಕೊಂಡು ಪಾವತಿಸಲು ಅವಕಾಶವಿರುವುದಿಲ್ಲ.

ನಿಗಮ, ಮಂಡಳಿ ಮತ್ತು ಸ್ವಾಯತ್ತ ಸಂಸ್ಥೆಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಕೆಲವು ಅಧಿಕಾರಿ / ಸಿಬ್ಬಂದಿಗಳನ್ನು ಮಹಾಲೇಖಪಾಲರು ಸಾಮಾನ್ಯ ಭವಿಷ್ಯ ನಿಧಿಯ ಚಂದಾದಾರರನ್ನಾಗಿ ನೋಂದಾಯಿಸಿಕೊಂಡಿರುವ 27 ಪ್ರಕರಣಗಳಿಗೆ ಸಂಬಂಧ ಅಂತಿಮ ಹಿಂತೆಗೆತ ಪಾವತಿಗಾಗಿ ಮಹಾಲೇಖಪಾಲರು ಪ್ರಾಧಿಕಾರ ಪತ್ರ ನೀಡಿದ್ದು, ಖಜಾನೆಯಲ್ಲಿ ಅಂಗೀಕರಿಸಿ ಪಾವತಿಸಲು ಮೇಲೆ ಓದಲಾದ (3)ರ ಪತ್ರದಲ್ಲಿ ಕೋರಿರುತ್ತಾರೆ.

ಇಂತಹ ಪ್ರಕರಣಗಳಲ್ಲಿ ಚಂದಾದಾರರ KGID ಪಾಲಿಸಿ ಸಂಖ್ಯೆ ಇಲ್ಲದೆ ಇರುವುದರಿಂದ ಭವಿಷ್ಯ ನಿಧಿ ಪಾವತಿಸಲು ಸರ್ಕಾರಿ ನೌಕರರಾಗಿ ಸ್ವೀಕರ್ತರನ್ನಾಗಿ ನೋಂದಾಯಿಸಿ ಪಾವತಿಸಲು ಬರುವುದಿಲ್ಲ ಹಾಗೂ ಖಜಾನೆಯಿಂದ ನೇರವಾಗಿ ಪಾವತಿ ಮಾಡುವುದರಿಂದ ಖಜಾನೆ-2 ರ ತಂತ್ರಾಂಶದಲ್ಲಿ ಹಲವಾರು ವ್ಯತ್ಯಯಗಳು ಉಂಟಾಗುತ್ತವೆ. ಪಾವತಿಗಳನ್ನು ಹೆಚ್ಚಿನ ಹೊಣೆಗಾರಿಕೆಯಿಂದ ಸರಿಯಾದ ಸ್ವೀಕರ್ತರಿಗೆ ಪಾವತಿಸುವ ಉದ್ದೇಶದಿಂದ ಇಂತಹ ಪಾವತಿಗಳನ್ನು ಸ್ವಾಯತ್ತ ಸಂಸ್ಥೆಗಳ ನಿಯಂತ್ರಣ ಇಲಾಖೆಗಳಿಗೆ ವಹಿಸಬಹುದಾಗಿದ್ದು, ಮಹಾಲೇಖಪಾಲರು ಸಂಬಂಧಪಟ್ಟ ಇಲಾಖೆಯ ಸಿಸಿಓ ರವರಿಗೆ ಪ್ರಾಧಿಕಾರವನ್ನು ನೀಡಿದಲ್ಲಿ ಸದರಿ ಸಿಸಿಓ ರವರು ಖಜಾನೆ-2 ರವರನ್ನು ಸಂಪರ್ಕಿಸಿ ಭವಿಷ್ಯ ನಿಧಿ ಚಂದಾದಾರರನ್ನು ಸ್ವೀಕರ್ತರನ್ನಾಗಿ ನೋಂದಾಯಿಸಿಕೊಂಡು ಆನ್‌ಲೈನ್ ಮೂಲಕ ಪಾವತಿಸಬಹುದಾಗಿದೆ ಎಂದು ಖಜಾನೆ ಆಯುಕ್ತರು ತಿಳಿಸಿ, ಈ ಬಗ್ಗೆ ಸೂಕ್ತ ಸರ್ಕಾರಿ ಆದೇಶವನ್ನು ಹೊರಡಿಸುವಂತೆ ಮೇಲೆ(2)ರ ಪತ್ರದಲ್ಲಿ ಕೋರಿರುತ್ತಾರೆ.

ಪ್ರಸ್ತಾವನೆಯನ್ನು ಕೂಲಂಕುಷವಾಗಿ ಪರಿಶೀಲಿಸಿ, ಈ ಕೆಳಗಿನಂತೆ ಆದೇಶಿಸಿದೆ.

**ಸರ್ಕಾರದ ಆದೇಶ ಸಂಖ್ಯೆ: ಆಇ 22 ಟಿಪಿಆರ್ 2021**
**ಬೆಂಗಳೂರು, ದಿನಾಂಕ:26-11-2021.**

ನಿಗಮ, ಮಂಡಳಿ, ಪ್ರಾಧಿಕಾರ ಮತ್ತಿತರ ಸ್ವಾಯತ್ತ ಸಂಸ್ಥೆಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಸರ್ಕಾರೇತರ ನೌಕರರಿಗೆ ಸಂಬಂಧಿಸಿದ ಸಾಮಾನ್ಯ ಭವಿಷ್ಯ ನಿಧಿ ಪ್ರಕರಣಗಳಿಗೆ ಸಂಬಂಧಿಸಿದಂತೆ ಭವಿಷ್ಯ ನಿಧಿ ಹಣವನ್ನು ಪಾವತಿಸಲು ಮಹಾಲೇಖಪಾಲರು ಸಂಬಂಧಿಸಿದ ನಿಯಂತ್ರಣ ಇಲಾಖೆಗಳಿಗೆ ಪ್ರಾಧೀಕರಣ ನೀಡಲು ಆದೇಶಿಸಿದೆ. ಈ ರೀತಿ ಮಹಾಲೇಖಪಾಲರಿಂದ ಪ್ರಾಧೀಕರಣ ಪಡೆಯಲ್ಪಟ್ಟ ನಿಯಂತ್ರಣ ಇಲಾಖೆಯು ಖಜಾನೆ-2 ತಾಂತ್ರಿಕ ವಿಭಾಗವನ್ನು ಸಂಪರ್ಕಿಸಿ ಭವಿಷ್ಯನಿಧಿ ಚಂದಾದಾರರನ್ನು ಸ್ವೀಕರ್ತರನ್ನಾಗಿ ಖಜಾನೆ-2 ರಲ್ಲಿ ನೋಂದಾಯಿಸಿಕೊಂಡು ನೇರವಾಗಿ ಚಂದಾದಾರನ ಬ್ಯಾಂಕ್ ಖಾತೆಗೆ ಪಾವತಿಸಲು ಆದೇಶಿಸಿದೆ.

ಮಹಾಲೇಖಪಾಲರು ಚಂದಾದಾರರ ಅಂತಿಮ ಹಿಂತೆಗೆತ ಪ್ರಾಧಿಕಾರಣಗಳನ್ನು ಅನುಬಂಧಪಟ್ಟಿಯಲ್ಲಿ ತಿಳಿಸಿರುವ ಮುಖ್ಯ ನಿಯಂತ್ರಣಾಧಿಕಾರಿ(ಸಿಸಿಓ) ಹಾಗೂ ಸಂಬಂಧಪಟ್ಟ ಖಜಾನೆಗೆ ಪ್ರಾಧಿಕಾರಣವನ್ನು ನೀಡಲು ಆದೇಶಿಸಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ
**Signed by Shobha Ha**
**Date: 26-11-2021 13:13:00**
(ಹೆಚ್.ಪಿ. ಶೋಭ)
ಸರ್ಕಾರದ ಉಪ ಕಾರ್ಯದರ್ಶಿ
ಆರ್ಥಿಕ ಇಲಾಖೆ (ಆನಿ ಮತ್ತು ಬಿಸಿಸಿ)

ಇವರಿಗೆ:

1. ಪ್ರಧಾನ ಮಹಾಲೇಖಪಾಲರು, ಲೆಕ್ಕಪತ್ರಗಳು ಮತ್ತು ಹಕ್ಕುಗಳು, ಕರ್ನಾಟಕ, ರೆಸಿಡೆನ್ಸಿ ರಸ್ತೆ, ಅಂಚೆ ಪೆಟ್ಟಿಗೆ 5326/5369 ಬೆಂಗಳೂರು.
2. ಪ್ರಧಾನ ಮಹಾಲೇಖಪಾಲರು(ಲೆಕ್ಕ ತನಿಖೆ-1), ರೆಸಿಡೆನ್ಸಿ ರಸ್ತೆ, ಅಂಚೆ ಪೆಟ್ಟಿಗೆ 5329/5369, ಕರ್ನಾಟಕ ಬೆಂಗಳೂರು.
3. ಸರ್ಕಾದ ಕಾರ್ಯದರ್ಶಿ, ಸಿ.ಆ.ಸು.ಇ. ವಿಧಾನಸೌಧ, ಬೆಂಗಳೂರು.
4. ಆಯುಕ್ತರು, ಖಜಾನೆ ಆಯುಕ್ತಾಲಯ, 6ನೇ ಮಹಡಿ, ಕೆ.ಪಿ.ಸಿ.ಎಲ್, ಗ್ರೀನ್ ಬಿಲ್ಡಿಂಗ್, ಔಷಧ ನಿಯಂತ್ರಣ ಕಛೇರಿ ಕಟ್ಟಡದ ಆವರಣ, ಅರಮನೆ ರಸ್ತೆ, ಬೆಂಗಳೂರು-1.
5. ಉಪ ಮಹಾಲೇಖಪಾಲರು(Funds), ರೆಸಿಡೆನ್ಸಿ ರಸ್ತೆ, ಅಂಚೆ ಪೆಟ್ಟಿಗೆ 5329/5369, ಕರ್ನಾಟಕ ಬೆಂಗಳೂರು.
6. ನಿರ್ದೇಶಕರು, ಕಾಡಾ ನಿರ್ದೇಶನಾಲಯ, ಬೆಂಗಳೂರು.
7. ನಿರ್ದೇಶಕರು, ಪೌರಾಡಳಿತ ನಿರ್ದೇಶನಾಲಯ, 9ನೇ ಮಹಡಿ, ವಿವಿ ಗೋಪುರ, ಬೆಂಗಳೂರು-560 001.
8. ಮುಖ್ಯ ಅಭಿಯಂತರರು, ಲೋಕೋಪಯೋಗಿ, ಸಂಪರ್ಕ ಮತ್ತು ಕಟ್ಟಡ, ಕೆ.ಆರ್. ವೃತ್ತ, ಬೆಂಗಳೂರು-560 001.
9. ಶಾಖಾ ರಕ್ಷಾ ಕಡತ/ಹೆಚ್ಚುವರಿ ಪ್ರತಿಗಳು.

I/189906/2021

<u>ಸರ್ಕಾರದ ಆದೇಶ ಸಂ:ಆಇ 22 ಟಿಎಆರ್ 2021.</u>

<u>ದಿನಾಂಕ:26-11-2021.</u>

## <u>ಅನುಬಂಧ</u>

| ಕ್ರಮ ಸಂ: | ಸ್ವಾಯತ್ತ ಸಂಸ್ಥೆಗಳು | ಹಣ ಸೆಳೆಯುವ ಮತ್ತು ಬಟವಾಡೆ ಅಧಿಕಾರಿ |
|---|---|---|
| 1 | ಪುರಸಭೆ/ನಗರಸಭೆ/ ಮಹಾನಗರ ಪಾಲಿಕೆ ಮುಂತಾದ ಸ್ಥಳೀಯ ಸಂಸ್ಥೆಗಳು | ನಿರ್ದೇಶಕರು ಪೌರಾಡಳಿತ ಇಲಾಖೆ |
| 2 | ಜಲ ಸಂಪನ್ಮೂಲ ಇಲಾಖೆಗೆ ಒಳಪಡುವ ಸ್ವಾಯತ್ತ ಸಂಸ್ಥೆಗಳು | ಕಾಡಾ ನಿರ್ದೇಶನಾಲಯ |
| 3 | ಲೋಕೋಪಯೋಗಿ ಇಲಾಖೆಗೆ ಒಳಪಡುವ ಸ್ವಾಯತ್ತ ಸಂಸ್ಥೆಗಳು | ಮುಖ್ಯ ಅಭಿಯಂತರರು (ಕಟ್ಟಡ ಮತ್ತು ಸಂಪರ್ಕ) |
| 4 | ಕೃಷಿ ಇಲಾಖೆಗೆ ಒಳಪಡುವ ಸ್ವಾಯತ್ತ ಸಂಸ್ಥೆಗಳು | ಕೃಷಿ ಆಯುಕ್ತರು |
| 5 | ಸಾಮಾನ್ಯ ಆಡಳಿತ | ಲೆಕ್ಕ ಪತ್ರ ಶಾಖೆ, ಸಿ.ಆ.ಸು.ಇ. |